ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2012-13ನೇ ಸಾಲಿಗೆ ರಾಜ್ಯದ ವಿವಿಧ ಜಿಲ್ಲೆ/ತಾಲ್ಲೂಕು/ ಪಟ್ಟಣ/ಹೋಬಳಿಗಳಲ್ಲಿ ವಾಲ್ಮೀಕಿ ಭವನ ನಿರ್ಮಿಸುವ ಬಗ್ಗೆ.

ಓದಲಾಗಿದೆ:- ಪತ್ರ ಸಂಖ್ಯೆ:ಪವಕನಿ/ಸಂವಿ/ಸಿಆರ್-286/2013-14, ದಿನಾಂಕ: 12-02--2013

*****

ಪ್ರಸ್ತಾವನೆ:-

ಮೇಲೆ ಓದಲಾದ ಪತ್ರದಲ್ಲಿ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರು 2012-13ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ-2225-02-283-0-02 ಯೋಜನೆಯಡಿ ಪರಿಶಿಷ್ಠ ಪಂಗಡಗಳ ಉಪ ಯೋಜನೆಯ ಕ್ರೋಡೀಕೃತ ಅನುದಾನದಲ್ಲಿ ವಾಲ್ಮೀಕಿ ಭವನಗಳ ನಿರ್ಮಾಣಕ್ಕಾಗಿ ರೂ.20.00 ಕೋಟಿಗಳನ್ನು ನಿಗಧಿಪಡಿಸಿದೆ. ಈ ಮೊತ್ತದಲ್ಲಿ ಮೊದಲನೇ ಕಂತಾಗಿ ರೂ.7.00ಕೋಟಿಗಳು, ಹಾಗೂ 3ನೇ ತ್ರೈಮಾಸಿಕ ಕಂತಿನಲ್ಲಿ ರೂ.7.00ಕೋಟಿಗಳು ಒಟ್ಟು ರೂ.14.00ಕೋಟಿಗಳು ಬಿಡುಗಡೆಯಾಗಿದ್ದು, ಈ ಮೊತ್ತದಲ್ಲಿ ಉಳಿಕೆ ರೂ.7.00ಕೋಟಿ ಲಭ್ಯವಿರುವುದಾಗಿ ತಿಳಿಸಿರುತ್ತಾರೆ, ಹಾಗೂ ಸದರಿ ಅನುದಾನದಲ್ಲಿ ರಾಜ್ಯದ ವಿವಿಧ ಸ್ಥಳಗಳಲ್ಲಿ ಮಹರ್ಷಿ ವಾಲ್ಮೀಕಿ ಭವನಗಳನ್ನು ನಿರ್ಮಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:ಸಕಇ 108 ಪವಯೋ 2012, ಬೆಂಗಳೂರು ದಿನಾಂಕ:20-03-2013**

2012-13ನೇ ಸಾಲಿಗೆ ಈ ಕೆಳಕಂಡ ಸ್ಥಳಗಳಲ್ಲಿ, ವಾಲ್ಮೀಕಿ ಭವನಗಳನ್ನು ನಿರ್ಮಿಸಲು ಸರ್ಕಾರದ ತಾತ್ವಿಕ ಮಂಜೂರಾತಿ ನೀಡಲಾಗಿದೆ.

| ಕ್ರಮ ಸಂಖ್ಯೆ | ಜಿಲ್ಲೆ/ತಾಲ್ಲೂಕು/ಇತರೆ ಸ್ಥಳ | ರೂ.ಲಕ್ಷಗಳಲ್ಲಿ |
|---|---|---|
| 1 | ಚಿತ್ತಾಪುರ ಪಟ್ಟಣ, ಗುಲ್ಬರ್ಗ ಜಿಲ್ಲೆ | 100.00 |
| 2 | ಬಳಿಚಕ್ರ ಹೋಬಳಿ, ಯಾದಗಿರಿ ಜಿಲ್ಲೆ | 50.00 |
| 3 | ಬಿಳಿಕೆರೆ ಹೋಬಳಿ, ಹುಣಸೂರು ತಾ: ಮೈಸೂರು ಜಿಲ್ಲೆ | 50.00 |
| 4 | ವಿರಾಜಪೇಟೆ ಪಟ್ಟಣ, ಕೊಡಗು ಜಿಲ್ಲೆ | 100.00 |
| 5 | ಸವದತ್ತಿ ಪಟ್ಟಣ, ಬೆಳಗಾಂ ಜಿಲ್ಲೆ | 100.00 |
| 6 | ಪಾವಗಡ ಪಟ್ಟಣ, ತುಮಕೂರು ಜಿಲ್ಲೆ | 100.00 |
| 7 | ಹೊಸಪೇಟೆ ಪಟ್ಟಣ, ಬಳ್ಳಾರಿ ಜಿಲ್ಲೆ, | 100.00 |
| 8 | ಶಿರವಾರ ಹೋಬಳಿ, ರಾಯಚೂರು ಜಿಲ್ಲೆ | 50.00 |
| 9 | ಗಿಲ್ಲೆಕೇಸೂಗೂರು ಹೋಬಳಿ , ರಾಯಚೂರು ಜಿಲ್ಲೆ | 50.00 |
| 10 | ಯರಗೇರಾ ಹೋಬಳಿ, ರಾಯಚೂರು ಜಿಲ್ಲೆ | 50.00 |
| 11 | ಚಂದ್ರಾಬಂಡಾ ಹೋಬಳಿ, ರಾಯಚೂರು ಜಿಲ್ಲೆ | 50.00 |
| 12 | ಮೊಳಕಾಲ್ಮೂರು ಪಟ್ಟಣ, ಚಿತ್ರದುರ್ಗ ಜಿಲ್ಲೆ | 100.00 |
| 13 | ನೆಲಮಂಗಲ ಪಟ್ಟಣ, ಬೆಂಗಳೂರು ಗ್ರಾ.ಜಿಲ್ಲೆ | 100.00 |
| 14 | ಮುಧೋಳ ಪಟ್ಟಣ, ಬಾಗಲಕೋಟೆ ಜಿಲ್ಲೆ | 100.00 |
| 15 | ನರಗುಂದ ಪಟ್ಟಣ, ಗದಗ ಜಿಲ್ಲೆ | 100.00 |
| 16. | ರಾಣಿಬೆನ್ನೂರು ಪಟ್ಟಣ, ಹಾವೇರಿ ಜಿಲ್ಲೆ | 100.00 |
| 17 | ಶಹಪುರ ಪಟ್ಟಣ, ಯಾದಗಿರಿ ಜಿಲ್ಲೆ, | 100.00 |
| 18 | ಸುರಪುರ ಪಟ್ಟಣ, ಯಾದಗಿರಿ ಜಿಲ್ಲೆ | 100.00 |
| 19 | ಕನಕಪುರ ಪಟ್ಟಣ, ರಾಮನಗರ ಜಿಲ್ಲೆ | 100.00 |

| | | |
|---|---|---|
| 20 | ಶ್ರೀ ಮಹರ್ಷಿ ವಾಲ್ಮೀಕಿ ಸಾರ್ವಜನಿಕ ಕ್ಷೇಮಾಭಿವೃದ್ಧಿ ಟ್ರಸ್ಟ್ (ರಿ) ಹುಣಸೂರು ತಾಲ್ಲೂಕು ರವರ ವತಿಯಿಂದ ನಿರ್ಮಾಣವಾಗುತ್ತಿರುವ ಸಮುದಾಯ ಭವನಕ್ಕೆ ಮುಂದುವರಿದ ಕಾಮಗಾರಿಗಾಗಿ. | 25.00 |
| 21 | ಚಿಕ್ಕತಿರುಪತಿ ಪಟ್ಟಣ, ಕೋಲಾರ ಜಿಲ್ಲೆ | 50.00 |
| 22 | ಹುಲ್ಲಹಳ್ಳಿ ಹೋಬಳಿ, ಮೈಸೂರು ಜಿಲ್ಲೆ | 50.00 |

ಷರತ್ತುಗಳು:-

(1) ಈ ಮೇಲ್ಕಂಡ ಸ್ಥಳಗಳಿಗೆ 2012-13ನೇ ಸಾಲಿನಲ್ಲಿ ಪರಿಶಿಷ್ಟ ಪಂಗಡಗಳ ಉಪಯೋಜನೆಯಡಿ ಕ್ರೋಢೀಕರಿಸಿದ ಅನುದಾನದಲ್ಲಿ ವಾಲ್ಮೀಕಿ ಭವನ ನಿರ್ಮಾಣ ಮಾಡಲು ಮೊದಲನೇ ಕಂತಾಗಿ ತಲಾ ರೂ.25.00 ಲಕ್ಷಗಳಂತೆ ಬಿಡುಗಡೆ ಮಾಡುವುದು.

(2) ಸರ್ಕಾರಿ ಆದೇಶ ಸಂಖ್ಯೆ ಸಕಇ 180 ಪಕವಿ 2011, ಬೆಂಗಳೂರು ದಿನಾಂಕ 28-09-2011ರ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಅನುಸರಿಸತಕ್ಕದ್ದು.

(3) ಶ್ರೀ ಮಹರ್ಷಿ ವಾಲ್ಮೀಕಿ ಭವನ ನಿರ್ಮಿಸಲು ಉದ್ದೇಶಿಸಿರುವ ಸ್ಥಳಕ್ಕೆ ಸಂಬಂಧಿಸಿದ ಗ್ರಾಮ ಪಂಚಾಯಿತಿ: ಪುರಸಭೆ: ನಗರಾಭಿವೃದ್ಧಿ ಪ್ರಾಧಿಕಾರ ಇವರಿಂದ ನಿರ್ದೇಶನ ಪಡೆಯಲು ಕ್ರಮಕೈಗೊಳ್ಳತಕ್ಕದ್ದು.

(4) ಉದ್ದೇಶಿತ ಭವನದ ಕಟ್ಟಡದ ಅಂದಾಜುಗಳ ಪಟ್ಟಿಗೆ ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಹಾಗೂ ಆಡಳಿತಾತ್ಮಕ ಅನುಮೋದನೆ ಪಡೆಯತಕ್ಕದ್ದು.

(5) ಯಾವುದೇ ಭವನದ ನಿರ್ಮಾಣ ವೆಚ್ಚವು ಉಲ್ಲೇಖಿತ ಅಂದಾಜು ವೆಚ್ಚ ಮೀರಿದ್ದಲ್ಲಿ ಅಂತಹ ಮೊತ್ತವನ್ನು ಸ್ಥಳೀಯ ಮೂಲಗಳಿಂದ ಸಂಗ್ರಹಿಸತಕ್ಕದ್ದು.

(6) ಸದರಿ ಭವನಗಳ ನಿರ್ಮಾಣ ಉಸ್ತುವಾರಿಯನ್ನು ಸಂಬಂಧಪಟ್ಟ ಯೋಜನಾ ಸಮನ್ವಯಾಧಿಕಾರಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ/ಜಿಲ್ಲಾ ಪರಿಶಿಷ್ಟ ಪಂಗಡಗಳ ಕಲ್ಯಾಣ ಅಧಿಕಾರಿ/ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಇವರು ನೋಡಿಕೊಳ್ಳತಕ್ಕದ್ದು.

(7) ಭವನ ನಿರ್ಮಾಣ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ (1999) ಹಾಗೂ ಅದರಡಿ ರೂಪಿಸಿರುವ ನಿಯಮಗಳಲ್ಲಿ ನಿಗದಿಗೊಳಿಸಿರುವ "ಕಾರ್ಯವಿಧಾನ" (procedure) ಪಾಲಿಸತಕ್ಕದ್ದು.

ಈ ಸಂಬಂಧದ ವೆಚ್ಚವನ್ನು 2012-13ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2225-02-283-0-02 (ಯೋಜನೆ) ಅಡಿ ಗಿರಿಜನ ಉಪಯೋಜನೆಗೆ ಒದಗಿಸಲಾದ ಅನುದಾನದಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್. ನರಸಿಂಹಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಸಮಾಜ ಕಲ್ಯಾಣ ಇಲಾಖೆ

ಗೆ:-

1) ಮಹಾಲೇಖಪಾಲರು (ಎ & ಇ, ಲೆಕ್ಕಪರಿಶೋಧನೆ-1, 2) ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಕೃಷಿಭವನ, ಬೆಂಗಳೂರು.
3) ಸಂಬಂಧಪಟ್ಟ ಜಿಲ್ಲಾಧಿಕಾರಿ, ಯೋಜನಾ ಸಮನ್ವಯಾಧಿಕಾರಿ,
4) ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, /ಜಿಲ್ಲಾ ಪರಿಶಿಷ್ಟ
5) ವರ್ಗಗಳ ಕಲ್ಯಾಣ ಅಧಿಕಾರಿ /ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ
6) ಉಪ ನಿರ್ದೇಶಕರು, ಖಜಾನೆ ಗಣಕ ಜಾಲ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.

(3–6:) ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು ಇವರ ಮುಖಾಂತರ

7) ಸರ್ಕಾರದ ಉಪ ಕಾರ್ಯದರ್ಶಿ-2, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು,
8) ಶಾಖಾ ರಕ್ಷಾ ಕಡತ.
9) ಹೆಚ್ಚುವರಿ ಪ್ರತಿಗಳು-03